P and SC 48/2024 R.W.1

ದಿ: 01-04-2026 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ HNS ವಕೀಲರಿಂದ ಅರ್ಜಿದಾರರು ಪರವಾಗಿಃ**

1. ಎಲ್ ಬಸಪ್ಪ ನನ್ನ ತಂದೆಯ ತಂದೆ. ಎಲ್ ಬಸಪ್ಪನವರ ಹೆಂಡತಿ ಹೆಸರು ರುದ್ರ ಮ್ಮ ಎಂದರೆ ನಿಜ. ಬಸಪ್ಪ ಮತ್ತು ರುದ್ರಮ್ಮನವರು ಈಗ ಜೀವಂತ ಇಲ್ಲ ಎಂದರೆ ನಿಜ. 31.03.2022 ರಂದು ಎಲ್ ಬಸಪ್ಪರವರು ತೀರಿಕೊಂಡರು ಮತ್ತು 1992 ರಲ್ಲಿ ರುದ್ರಮ್ಮರವರು ತೀರಿಕೊಂಡರು ಎಂದರೆ ನಿಜ. 1 ರಿಂದ 3 ನೇ ಅರ್ಜಿದಾರರು ಮತ್ತು ಎದುರುದಾರ 3 ರಿಂದ 5 ರವರು ಎಲ್ ಬಸಪ್ಪ ಮತ್ತು ರುದ್ರಮ್ಮನವರ ವಾರಸುದಾರರರು ಎಂದರೆ ನಿಜ. ನಾನು ಮತ್ತು 2 ನೇ ಎದುರುದಾರರು 4 ನೇ ಎದುರುದಾರರ ಮಕ್ಕಳು ಅಂದರೆ ನಿಜ. ಈ ಎಲ್ಲಾ ವಿಚಾರ ಈ ಪ್ರಕರಣ ದಾಖಲು ಮಾಡುವ ಕಾಲಕ್ಕೆ ನನಗೆ ತಿಳಿದಿತ್ತು. ಹಿಂದಿನ ಪಿ ಅಂಡ್ ಎಸ್ 11/2023 ರಲ್ಲಿ ಅರ್ಜಿದಾರರು 1 ರಿಂದ 3 ಮತ್ತು ಎದುರುದಾರ 3 ರಿಂದ 5 ರವರನ್ನು ಪಾರ್ಟಿಯಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ ನೋಟೀಸು ಕೊಟ್ಟು ಪೇಪರ್ ನಲ್ಲಿ ಹಾಕಿಸಿರುತ್ತಾರೆ. special citation ಏನೂ ಕೊಡಲಿಲ್ಲ.
2. ಅರ್ಜಿನಲಿ ಕಾಣಿಸಿದ ಆಸ್ತಿ ಮೂಲತಃ ಲೋಕಿಕೆರೆ ಹನುಮಂತಪ್ಪ ಯಾನೆ ಹನುಮಪ್ಪ ಅವರಿಗೆ ಸೇರಿದ್ದು ಎಂದರೆ ನಿಜ. ಸದರಿ ಆಸ್ತಿಯನ್ನು ಹನುಮಪ್ಪ ರವರು ನಾಗಪ್ಪನವರಿಂದ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಲೋಕಿಕೆರೆ ಹನುಮಪ್ಪನವರ ಮರಣದ ನಂತರ ಅವರ ಆಸ್ತಿಯನ್ನು ಅವರ ಮಕ್ಕಳಾದ ಎಲ್ ಬಸಪ್ಪ, ಕೆಂಚ ವೀರಪ್ಪ, ದ್ಯಾಮಮ್ಮ ಮತ್ತು ಗೌರಮ್ಮ ಇವರು ಆ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡರು ಎಂದರೆ ನಿಜ. ವಿಭಾಗ ಮಾಡಿಕೊಂಡಾಗ ಅರ್ಜಿ ಆಸ್ತಿ ಎಲ್ ಬಸಪ್ಪನ ಹೆಸರಿಗೆ ಬಂತು ಎಂದರೆ ನಿಜ. ವಿಭಾಗ ಮಾಡಿಕೊಂಡ ನಂತರ ಎಲ್ಲರೂ ತಮ್ಮ ತಮ್ಮ ಭಾಗಕ್ಕೆ ಬಂದಂತಹ ಆಸ್ತಿಯನ್ನು ಅನುಭವಿಸಿಕೊಂಡು ಇದ್ದರು ಎಂದರೆ ನಿಜ. ಆದ್ದರಿಂದ ಅರ್ಜಿಯಲ್ಲಿ ಕಾಣಿಸಿದ ಆಸ್ತಿಗಳು

ಪಿತ್ರಾರ್ಜಿತ ಆಸ್ತಿಗಳು ಎಂದರೆ ನಿಜ. ನಂತರ 28-11-2007 ರಲ್ಲಿ ಎಲ್ ಬಸಪ್ಪ ಮತ್ತು ಆತನ ಮಕ್ಕಳು ಅಂದರೆ ಅರ್ಜಿದಾರರು 1 ರಿಂದ 3 ಮತ್ತು ಎದುರುದಾರರು 3 ರಿಂದ 5 ರವರು ಕುಟುಂಬದ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡರು ಎಂದರೆ ನಿಜ. ಅರ್ಜಿ ಆಸ್ತಿಯನ್ನು ಎಲ್ ಬಸಪ್ಪನವರ ಜೀವನಾಂಶಕ್ಕೆ ತೆಗೆದಿದ್ದ ಆಸ್ತಿಯಾಗಿರುತ್ತದೆ ಅದರಲ್ಲಿ ಪಾಲುವಿಭಾಗ ಆಗಿರಲಿಲ್ಲ ಎಂದರೆ ನಿಜ. ಹಾಗಾಗಿ ಅರ್ಜಿ ಆಸ್ತಿ ಎಲ್ ಬಸಪ್ಪನವರ ಸ್ವಯಾರ್ಜಿತ ಆಸ್ತಿಯಾಗಿರುವುದಿಲ್ಲ ಎಂದರೆ ನಿಜ. ಎಲ್ ಬಸಪ್ಪನವರು ಅರ್ಜಿ ಆಸ್ತಿಗೆ ಸಂಪೂರ್ಣ ಮಾಲೀಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ ಬಸಪ್ಪರವರು ಮರಣ ಹೊಂದುವ ಕಾಲಕ್ಕೆ ಸುಮಾರು 90 ವರ್ಷ ಆಗಿತ್ತು ಎಂದರೆ 85 ವರ್ಷಗಳು ಆಗಿತ್ತು ಎನ್ನುತ್ತಾರೆ. ಎಲ್ ಬಸಪ್ಪ ರವರು ತೀರಿಕೊಳ್ಳುವ 2 ವರ್ಷಗಳ ಹಿಂದಿನಿಂದ ಅವರಿಗೆ ಅನಾರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಅವರಿಗೆ ಕಿವಿ ಕೇಳಿಸುತ್ತಿರಲ್ಲಿಲ್ಲ ಮತ್ತು ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಎಲ್ ಬಸಪ್ಪರವರಿಗೆ ಇನ್ನೊಬ್ಬರ ಸಹಾಯ ಇಲ್ಲದೇ ನಡೆಯಲು ಸಹ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ತೀರ ವಯಸ್ಸಾದ ಕಾರಣ ಏನೇನೋ ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಹುಚ್ಚು ಬಸಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ.

3. ನಿಡಿ-1 ರ ಮೂಲ ದಾಖಲೆ ಎಲ್ ಬಸಪ್ಪರವರ ಸ್ವಾಧೀನದಲ್ಲೇ ಇತ್ತು. ಮನೆಯಲ್ಲಿ ಏನೋ ಹುಡುಕುತ್ತಿರುವಾಗ ನಿಡಿ-1 ದಾಖಲೆ ಸಿಕ್ಕಿತು. ನಿಡಿ-1 ಬರೆಯುವಾಗ ನಾನು ಅಲ್ಲಿ ಹಾಜರು ಇರಲಿಲ್ಲ. ಅದಕ್ಕೆ ಷಣ್ಮುಖಪ್ಪ ಮತ್ತು ಮಲ್ಲಿಕಾರ್ಜುನರವರು ಸಾಕ್ಷಿದಾರರು ಇರುತ್ತಾರೆ. ಆ ಇಬ್ಬರು ಸಾಕ್ಷಿದಾರರನ್ನು ಹಿಂದಿನ ಪ್ರಕರಣದಲ್ಲಿ ಸಾಕ್ಷಿ ಮಾಡಿಸಿಲ್ಲ. ಎಲ್ ಬಸಪ್ಪರವರಿಗೆ ಅರ್ಜಿಪಿಯಲ್ಲಿ ಕಾಣಿಸಿದ ಆಸ್ತಿ ಕುರಿತು ಯಾವುದೇದ ದಾಖಲೆ ಬರೆಯಲು ಹಕ್ಕು ಇರಲಿಲ್ಲ ಆಸ್ತಿಯನ್ನು ಕಬಳಿಸಲು ನಾನು ನಿಡಿ-1 ರಂತೆ ದಾಖಲೆಯನ್ನು ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ. ಹಿಂದಿನ ಪ್ರಕರಣದಲ್ಲಿ ವಿಲ್ ನ್ನು ನನ್ನ ಮುಖಾಂತರ ಹಾಜರುಪಡಿಸಿದ್ದೇನೆ ಸಾಕ್ಷಿದಾರರ ಮೂಲಕ ಹಾಜರುಪಡಿಸಿಲ್ಲ ಎಂದರೆ ನಿಜ. ನಮ್ಮ ಮನೆಗೆ ನಾವು ವರ್ತಮಾನ ಪತ್ರಿಕೆಯನ್ನು ತರಿಸುವುದಿಲ್ಲ. ಹೊಸದಿಗಂತ ವರ್ತಮಾನ ಪತ್ರಿಕೆ

circulating news paper ಆಗಿರುವುದಿಲ್ಲ ಎಂದರೆ ಸರಿಯಲ್ಲ. ವರ್ತಮಾನ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ. ಸದರಿ ವರ್ತಮಾನ ಪತ್ರಿಕೆ ದಾವಣೆಗೆರೆಯಲ್ಲಿ ಪ್ರಸಾರ ಆಗುವುದಿಲ್ಲ ಶಿವಮೊಗ್ಗದಲ್ಲಿ ಪ್ರಸಾರ ಆಗುತ್ತದೆ ಎಂದರೆ ಸರಿಯಲ್ಲ, ಸತ್ಯ ಸಂಗತಿಯನ್ನು ಮುಚ್ಚಿಟ್ಟು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಖಾತಾ ಬದಲಾವಣೆ ಮಾಡುವ ಕಾಲಕ್ಕೆ ಅರ್ಜಿದಾರರು ರೆವೆನ್ಯೂ ಕಚೇರಿಯಲ್ಲಿ ತಕರಾರು ನೀಡಿದ್ದರು ಎಂದರೆ ನಿಜ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.